O.S. NO. 100/2022
PW -1 .
Dated 18-01-2025

ಸಾಕ್ಷಿಯನ್ನು ಈ ದಿನ ದಿನಾಂಕ 18-01-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ 7 ರಿಂದ 12 ಪ್ರತಿವಾದಿ ಪರವಾಗಿ ಶ್ರೀ ಬಿ ಆರ್ ಎ ವಕೀಲರಿಂದಃ

ಯಲ್ಲಪ್ಪನ ಮಕ್ಕಳಲ್ಲಿ ಶಿವಪ್ಪ ದೊಡ್ಡವನು ಎಂದರೆ ಸರಿ. 2 ನೇ ಮಗ ಎಂದರೆ ನನ್ನ ತಂದೆ ರುದ್ರಪ್ಪ ಎಂದರೆ ಸರಿ. ಶಿವಪ್ಪ 2005 ನೇ ಸಾಲಿನಲ್ಲಿ ಮೃತನಾಗಿರುತ್ತಾನೆ ಎಂದರೆ ಸರಿ. ಬಸಪ್ಪ 1997 ರಲ್ಲಿ ಮೃತಪಟ್ಟಿದ್ದಾನೆ ಎಂದರೆ ಸರಿ. ಶಿವಪ್ಪ ಮೃತ ಪಟ್ಟ ನಂತರ ನನ್ನ ತಂದೆ ಕುಟುಂಬದ ಹಿರಿತನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬಂದ ಹಿರಿತನವನ್ನು ನನ್ನ ಅಜ್ಜಿ ತಂಗೆಮ್ಮ ಮಾಡುತ್ತಿದ್ದರು. ನನ್ನ ಅಜ್ಜಿ ತಂಗೆಮ್ಮ 2006 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾಳೆ ಎಂದರೆ ಸರಿ. ಸದರಿ ತಂಗೆಮ್ಮ ಮೃತಪಟ್ಟ ನಂತರ 2006 ರಿಂದ ನನ್ನ ಕಾಕಾನ ಮಗನಾದ ರಾಜೇಶ್ವರ ಕುಟುಂಬದ ಹಿರಿತನವನ್ನು ಮಾಡುತ್ತಾ ಬಂದಿರುತ್ತಾನೆ. ನನ್ನ ತಂದೆ ಕುಟುಂಬಂದ ಹಿರಿತನ ಮಾಡಲು ಆಗುವುದಿಲ್ಲ ರಾಜೇಶ್ವರನಿಗೆ ಹಿರಿತನ ಮಾಡು ಅಂತಾ ಯಾವುದೇ ಲೇಖಿಯಲ್ಲಿ ದಾಖಲೆಯನ್ನು ಬರೆದು ಕೊಟ್ಟಿಲ್ಲ. ಅದೇ ರೀತಿ ಉಳಿದ ಪ್ರತಿವಾದಿಗಳು ರಾಜೇಶ್ವರನಿಗೆ ಕುಟುಂಬ ಹಿರಿತನ ಮಾಡಲಿ ಅಂತಾ ಯಾವುದೇ ದಾಖಲೆ ಬರೆದು ಕೊಟ್ಟಿಲ್ಲ. ತಂಗೆಮ್ಮ ಮೃತಪಟ್ಟ ನಂತರ 1 ನೇ ಪ್ರತಿವಾದಿ ರಾಜೇಶ್ವರ ಕುಟುಂಬದ ಹಿರಿತನ ಮಾಡುತ್ತಿದ್ದನ್ನು ಎಂದು ತೋರಿಸಲು ಯಾವುದೇ

ದಾಖಲೆಗಳು ಇರುವುದಿಲ್ಲ. ತಂಗೆಮ್ಮ ಮೃತಪಟ್ಟ ನಂತರ ಕುಟುಂಬದ ಹಿರಿತನ ನನ್ನ ತಂದೆ ಯವರೆ ಮಾಡುತ್ತಾ ಬಂದಿದ್ದರೂ ಸಹ 1 ನೇ ಪ್ರತಿವಾದಿ ಮಾಡುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ತಂದೆ ನಮ್ಮ ಕುಟುಂಬದ ಮ್ಯಾನೇಜರ ಆಗಿ ಕುಟುಂಬಂದ ಹಿರಿತನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಕುಟುಂಬದ ಮ್ಯಾನೇಜರ ನಾಗಿ ಸ್ವತಃ ವಾಟ್ನಿ ಪತ್ರ ಬರೆದು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಯಾವುವು ಪಿತ್ರಾರ್ಜಿತ ಜಮಿನುಗಳ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ, ಭೂ ನ್ಯಾಯ ಮಂಡಳಿಯವರು ಪಾರ್ಮ ನಂ. 11 ಸಾಗುವಳಿದಾರರಿಗೆ ಕೊಡುತ್ತಾರೆ ಎಂದರೆ ಸರಿ. ಭೂ ನ್ಯಾಯ ಮಂಡಳಿಯಿಂದ ಪಾರ್ಮ ನಂ. 11 ಯಾರ ಹೆಸರಿಗೆ ಕೊಟ್ಟಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಭೂ ನ್ಯಾಯ ಮಂಡಳಿಯಿಂದ ಬಂದ ಜಮಿನು ಯಾರ ಹೆಸರಿನಲ್ಲಿ ಸಾಗುವಳಿ ಮಾಡಲಾಗುತ್ತಿತ್ತು ಎಂದು ತೋರಿಸುವ ದಾಖಲೆ ಹಾಜರು ಮಾಡಿಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ಸೇರಿ ಸಾಗುವಳಿ ಮಾಡುತಿದ್ದರು ಎಂದು ನುಡಿದಿರುತ್ತಾರೆ. ಎಲ್ಲರ ಹೆಸರಿನಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ಉತಾರವನ್ನು ಹಾಜರು ಮಾಡಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಯಾವ ಉತಾರಗಳು ಎಲ್ಲರ ಹೆಸರಿನಲ್ಲಿ ಇವೆ ಎಂದು ತೋರಿಸುತ್ತೀರಾ ಎಂದರೆ ಸಾಕ್ಷಿ ತೋರಿಸಲು ಆಗುವುದಿಲ್ಲ ಎಂದು

ನುಡಿದಿರುತ್ತಾರೆ. ನಾನು ಹೇಳುತ್ತಿರುವಂತೆ ಎಲ್ಲರೂ ಸಾಗುವಳಿ ಮಾಡುತ್ತಿದ್ದ ಬಗ್ಗೆ ಯಾವುದೇ ಉತಾರ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಸರ್ವೆ ನಂ. 32/1 1996 ರಲ್ಲಿ ಎನ್ ಎ ಅಂತಾ ಭೂ ಪರಿವರ್ತನೆ ಆಗಿರುತ್ತದೆ ಎಂದರೆ ಸರಿ. ಸದರಿ ಜಮಿನದಲ್ಲಿ ವಾಸದ ಉದ್ದೇಶಕ್ಕಾಗಿ ನಿವೇಶನಗಳು ರಚನೆ ಆಗಿರುತ್ತವೆ ಎಂದರೆ ಸರಿ. ಸದರಿ ನಿವೇಶನಗಳು ಎಲ್ಲವು ಮಾರಾಟ ಆಗಿರುತ್ತವೆ ಎಂದರೆ ಸರಿ. ಸದರಿ ಜಮಿನದಲ್ಲಿ 20 ವಾಸದ ಮನೆಗಳು ನಿರ್ಮಾಣವಾಗಿರುತ್ತವೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಸಹ ನಾನು ಹಿಸ್ಸೆ ಕೇಳಿದ್ದೇನೆ ಎಂದರೆ ನಿಜ. ಸದರಿ ಜಮಿನದಲ್ಲಿ ಇದ್ದ ನಿವೇಶನಗಳ ಖರೀದದಾರನ್ನು ಈ ದಾವೆಯಲ್ಲಿ ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಜಮಿನದಲ್ಲಿ ನಿವೇಶನಗಳನ್ನು ರಚನೆ ಮಾಡಿದ್ದು ಮತ್ತು ಅವುಗಳನ್ನು ಮಾರಾಟ 1 ನೇ ಪ್ರತಿವಾದಿ ಮಾಡಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದ ಎಲ್ಲರೂ ಸೇರಿ ಮಾರಾಟ ಮಾಡಿದ್ದೇವೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಗೆ ತಾನು ಒಬ್ಬನೇ ಏಕೆ ಮಾರಾಟ ಮಾಡುತ್ತಿದ್ದಾನೆ ಎಂದು ಪ್ರಶ್ನಿಸಿ ನಾನಗಲಿ ನನ್ನ ತಂದೆ ಯಾಗಲಿ ತಕರಾರು ವಗೈರೆ ಮಾಡಿರುವುದಿಲ್ಲ. ಸರ್ವೆ ನಂ. 32/1 ಬಿನ ಶೇತ್ಕಿ ಆಗಿದೆ ಅಂತಾ ನನ್ನ ವಾದ ಪತ್ರದಲ್ಲಾಗಲಿ ಅಥವಾ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಎಲಲಿಯೂ ಉಲ್ಲೇಖ ಮಾಡಿರುವುದ್ಲಿಲ ಎಂದರೆ ಸರಿಯಲ್ಲ. ಪ್ಲಾಟಗಳ ಖರೀದಿದಾರರನ್ನು ಪಕ್ಷಗಾರನ್ನಾಗಿ ಮಾಡಬೇಕಾಗುತ್ತದೆ ಅಂತಾ

ಉದದ್ದೇಶ ಪೂರ್ವಕವಾಗಿ ಸರ್ವೆ ನಂ. 32/1 ನ್ನು ಶೇತ್ಕಿ ಜಮಿನು ಅಂತಾ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಹಿರಿಯರಿಂದ ಬಂದ ಎಲ್ಲ ಜಮಿನುಗಳು ಎಲ್ಲ ಒಂದೇ ತರ ಜಮಿನುಗಳು ಅಲ್ಲ ಎಂದರೆ ಸರಿಯಲ್ಲ. ನಮ್ಮ ಹಿರಿಯರಿಂದ ಎಷ್ಟು ಎಕರೆ ಮತ್ತು ಗುಂಟೆ ಜಮಿನುಗಳು ಬಂದಿರುತ್ತವೆ ಎಂದರೆ ಸಾಕ್ಷಿ ನನಗೆ ಎಕರೆ ಮತ್ತು ಗುಂಟೆ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ಹಿರಿಯರಿಂದ ಎಲ್ಲ ಜಮಿನುಗಳು ನೀರಾವರಿ ಜಮಿನುಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದ ಹಿಸ್ಸೆಯಲ್ಲಿ ಮಾತ್ರ 1 ತೆರೆದ ಬಾವಿ ಮತ್ತು 2 ಕೊಳವೆ ಬಾವಿಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಸ್ತಿಗಳಲ್ಲಿ ಇನ್ನೂವರೆಗೆ ಹಿಸ್ಸೆ ಆಗಿಲ್ಲ ಎಂದು ಸ್ವತಃ ನುಡಿದಿರುತ್ತಾರೆ.

ಪ. ಮ. ಚಿನಗುಡಿ ಮತ್ತು ಆರ್ . ಸಿ . ಸತ್ತಿಗೇರಿ ರವರ ಜೊತೆ ನನ್ನ ಸಂಬಂದ ಅನೊನ್ಯವಾಗಿ ಇರುತ್ತದೆ. ಇವರಲ್ಲಿ ಆರ್ ಸಿ ಸತ್ತಿಗೇರಿ ನನ್ನ ಖಾಸ ಸೊದರ ಮಾವ ಇರುತ್ತಾರೆ. ಸದರಿ ಪ. ಮ. ಚಿನಗುಡಿ ಮತ್ತು ಆರ್ . ಸಿ . ಸತ್ತಿಗೇರಿ ರವರು ನನಗೆ ಯಾವತ್ತು ಕೆಟ್ಟದ್ದನ್ನು ಬಯಸಿದವರಲ್ಲ. ಸಾಮಾನ್ಯವಾಗಿ ಊರಿನಲ್ಲಿ ಜಮಿನುಗಳ ಫಲವತ್ತತೆ ಮತ್ತು ಮಣ್ಣಿನ ಗುಣದರ್ಮದ ಆಧಾರದ ಮೇಲೆ ಹೆಚ್ಚು ಕಡಿಮೆ ಮಾಡಿ ವಾಟ್ನಿ ಮಾಡುತ್ತಿರುತ್ತಾರೆ ಎಂದರೆ ಸರಿ. ನನ್ನ ತಂದೆ ಸ್ವತಃ 2015ರಲ್ಲಿ ವಾಟ್ನಿ ಕಾಲಕ್ಕೆ ಸದರಿ

ಪ. ಮ. ಚಿನಗುಡಿ ಮತ್ತು ಆರ್ . ಸಿ . ಸತ್ತಿಗೇರಿ ರವರನ್ನು ಸ್ವತಃ ಹಿರಿತನ ಮಾಡಲು ಕರೆದಿದ್ದರು ಎಂದರೆ ಸರಿಯಲ್ಲ. 2015 ರ ವಾಟ್ನಿ ಯು ನನ್ನ ತಂದೆ ಹೇಳಿಕೆ ಪ್ರಕಾರ ಸದರಿ ಪ. ಮ. ಚಿನಗುಡಿ ಮತ್ತು ಆರ್ . ಸಿ . ಸತ್ತಿಗೇರಿ ರವರ ಸಮಕ್ಷಮ ಆಗಿರುತ್ತದೆ ಎಂದರೆ ಸರಿಯಲ್ಲ. 2015 ರ ನೊಂದಾಯಿತ ವಾಟ್ನಿ ಪತ್ರದ ಪ್ರಕಾರ ಅವರವರ ಹಿಸ್ಸೆಯ ಜಮಿನು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. 2015 ರಲ್ಲಿ ಆದ ವಾಟ್ನಿಯಂತೆ ನನ್ನ ತಂದೆಯವರು ತನ್ನ ಹಿಸ್ಸೆಗೆ ಬಂದ ಜಮಿನ ಮೇಲೆ ಬ್ಯಾಂಕನಿಂದ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಹಿಸ್ಸೆಗೆ ಬಂದ ಸಾಣಿಕೊಪ್ಪದ ಗ್ರಾಮದ ಜಮಿನ ಮೇಲೆ ಕೆನರಾ ಬ್ಯಾಂಕ ಮತ್ತು ಸಾಣಿಕೊಪ್ಪ ಕೊ ಆಪರೇಟಿವ ಸೊಸಾಯಟಿ ಯಿಂದ ಸಾಲ ಪಡೆದಿರುತ್ತಾನೆ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿಯ ಮಗ ಅವಿನಾಶ ಇವನು ವಾಟ್ನಿಯಲ್ಲಿ ತನ್ನ ತಂದೆ ಹಿಸ್ಸೆಗೆ ಬಂದ ಜಮಿನು ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನನ್ನ ತಂದೆ ಸಾಕ್ಷಿದಾರನಾಗಿ ಸಹಿ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದಲ್ಲಿ ವಾಟ್ನಿ ಪ್ರಕಾರ ಹಿಸ್ಸೆಗೆ ಬಂದ ಜಮಿನು ಅಂತಾ ನಮೂದಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. 2015 ರಲ್ಲಿ ಆದ ವಾಟ್ನಿ ಕಾನೂನು ಪ್ರಕಾರ ಯೊಗ್ಯವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ನನ್ನ ತಂದೆಗೆ ಒಪ್ಪಿಗೆ ಇದ್ದರೂ ಸಹ ಆತನಿಗೆ ಅಧಿಕಾರ ಪತ್ರ ಬರೆಸಿಕೊಂಡು ವಾಟ್ನಿ ಆಗಿಲ್ಲ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S. NO. 100/2022

PW -1 .

Dated 18-01-2025

ಈ ಹಂತದಲ್ಲಿ ವಕೀಲರು 1 ರಿಂದ 4 ಪ್ರತಿವಾದಿ ಪರ ವಕೀಲರು ಮತ್ತು 5 ಮತ್ತು 6 ನೇ ಪ್ರತಿವಾದಿಗಳ ಪರ ವಕೀಲರು ಮಾಡಿದ ಪಾಟಿಸವಾಲುನ್ನು ಮುಂದುವರೆದ ಪಾಟಿ ಸವಾಲು ಅಂತಾ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

ಪಾಟೀ ಸವಾಲುಃ 14 ನೇ ಪ್ರತಿವಾದಿ ಗೈರು ಹಾಜರು ಇರುತ್ತಾರೆ. ಅವರ ಪರ ಶ್ರೀ ಎ ವಿ ವಾಯ್ ವಕೀಲರು ಕಾಲಾವಕಾಶ ಕೊರಿದ್ದು ಯಾವುದೇ ಸಕಾರಣ ನೀಡದೇ ಇರುವುದರಿಂದ ಅವರ ಮನವಿಯನ್ನು ತಳ್ಳಿ ಹಾಕಿ 14 ನೇ ಪ್ರತಿವಾದಿ ಪರ ಸಾಕಿಃ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.